

ದಿಲ್ಲಿಗೆ, ಸಂತೆಯಿಂದ–ಸದನದವರೆಗೂ ಹಬ್ಬಿದೆ. ಕನ್ನಡದ ಎಲ್ಲಾ 24/7 ನ್ಯೂಸ್ ಚಾನೆಲ್‌ಗಳು ಕರ್ನಾಟಕದ ಪ್ರಭಾವಿ ರಾಜಕಾರಣಿಯೊಬ್ಬರ ಸದನದ ಆರ್ಭಟ, ಠೀವಿ, ಸವಾಲು–ಜವಾಬು ಸನ್ನಿವೇಶಗಳನ್ನು ತೋರಿಸುವಾಗ 'ಟಗರು ಬಂತು ಟಗರು' ಎಂಬ ಹಾಡು ಹಾಕಿ ಜನರನ್ನು ಈಗಲೂ ರಂಜಿಸುತ್ತಿದ್ದಾರೆ.

ಟಗರು ಪುರಾಣದಲ್ಲಿ ದಕ್ಷನಿಗೆ ತಲೆಯಾಯಿತು, ಮುಸಲ್ಮಾನರ ಹಬ್ಬಕ್ಕೆ ಬಕ್ರ ಆಯಿತು, ಅದೆಷ್ಟೋ ದೇವರುಗಳಿಗೆ ಹರಕೆಯ ಕುರಿಯಾಯಿತು, ಮುಂದೆ ಕನ್ನಡದ ಅನೇಕ ಸಿನಿಮಾಗಳ ಹಾಡಾಯಿತು–ಹೆಸರಾಯಿತು. ಹಾಸಲು–ಹೊದಿಯಲು–ಉಡಲು ಬಟ್ಟೆಯಾಯಿತು. ಹೀಗೆ ವಿಶ್ವವ್ಯಾಪಿಯಾಗಿರುವ ಕುರಿ–ಟಗರುಗಳ ಉಪಯುಕ್ತತೆ ಮತ್ತು ಮಹತ್ವವನ್ನು ಅರಿತ ಅಫ್ಘಾನಿಸ್ತಾನ ಮತ್ತು ಸೈಪ್ರಸ್ ದೇಶಗಳು ಕುರಿ ಜಾತಿಗೆ ಸೇರಿದ ಪ್ರಾಣಿಗಳನ್ನೇ ತಮ್ಮ ರಾಷ್ಟ್ರೀಯ ಪ್ರಾಣಿಯನ್ನಾಗಿಯೂ ಘೋಷಿಸಿಕೊಂಡಿವೆ. ಟಗರಿನ ಕೀರ್ತಿ ಹೀಗೆ ಏರುತ್ತಾ ಹೋಗಿ ಭಾರತದಲ್ಲಿ ಮುಂದೊಂದು ದಿನ ಟಗರು ಈ ದೇಶದ ಅಸ್ಮಿತೆಯ ಪ್ರತೀಕವೆಂದು ಕುರಿ–ಟಗರು ಹತ್ಯಾನಿಷೇಧ ಕಾಯ್ದೆ ಬಂದರೂ ಬರಬಹುದು. ಅದಕ್ಕೆ ರಾಜಕುಮಾರರ ಈ ಸಿನಿಮಾವೂ ಸಾಕ್ಷ್ಯವಾಗಿ ನಿಲ್ಲಬಹುದು ಬಲ್ಲವರಾರು? ಮುಂದಿನದು ಏನಾದರೂ ಆಗಲಿ, 'ಬಂಗಾರದ ಪಂಜರ' ಸಿನಿಮಾ ಮನುಷ್ಯ ಮತ್ತು ಸಾಕು ಪ್ರಾಣಿಯ ಸಹಬಾಳ್ವೆಗೆ ಸಂಕೇತದಂತೆ ಕಾಣುತ್ತದೆ. ಶಿವನ ಆಸ್ಥಾನವನ್ನೊಮ್ಮೆ ನೆನಪಿಸಿಕೊಂಡರೆ ಹಾವು, ನವಿಲು, ಇಲಿ, ದನ, ಭೃಂಗ, ಸಿಂಹ, ಹುಲಿ, ಹೋತ ಇತ್ಯಾದಿ ಪ್ರಾಣಿ–ಪಕ್ಷಿಗಳನ್ನು ಒಳಗೊಂಡ ಕೂಡು ಕುಟುಂಬ. ಶಿವನ ಕೈಲಾಸ ಭಾರತದ ಒಂದು ಹಳ್ಳಿಯಮನೆ–ತುಂಬಿದ ಮನೆ. ವಿಷ್ಣುವಿನ ಅವತಾರಗಳಾದ ಆಮೆ, ಹಂದಿ, ಸಿಂಹ, ಮೀನು ಅಷ್ಟೇ ಅಲ್ಲದೆ ಯಾವುದೇ ದೇವಾನುದೇವತೆಗಳನ್ನು ನೋಡಿ ಎಲ್ಲರ ಬಳಿಯೂ ಪ್ರಾಣಿ ಪಕ್ಷಿಗಳಿವೆ. ಇವೆಲ್ಲವು ಹೇಳುತ್ತಿರುವುದು ಸಮಗ್ರ ಪ್ರಕೃತಿಯೊಂದಿಗಿನ ಸಹಬಾಳ್ವೆಯ ಪಾಠವನ್ನು. ನಮ್ಮ ದೈವಗಳ ಸುತ್ತ ವಿವಿಧ ಸಂಸ್ಕೃತಿಗಳನ್ನು ಪ್ರತಿನಿಧಿಸುವ ಜೀವಿಗಳಿವೆ. ಇದನ್ನು ಹೀಗೆ ಒಟ್ಟಾಗಿ ಸ್ವೀಕರಿಸಿದರಲ್ಲವೇ ಚೆಂದ. ಆಧುನಿಕತೆಯು ಸೃಷ್ಟಿಸುತ್ತಿರುವ ವಿಘಟನೆಯಲ್ಲಿ ಎಲ್ಲ ಪ್ರಾಣಿ–ಪಕ್ಷಿ–ಕುಟುಂಬ–ಬಂಧುಗಳ ಪ್ರೇಮದ ಬಂಧನಗಳಿಂದ ಮುಕ್ತರಾಗುತ್ತಿದ್ದೇವಾ ಎನಿಸುತ್ತದೆ. ಅಥವಾ ವಿಘಟನೆಯೆಂಬುದೇ ಈಗಿನ ಕಾಲಧರ್ಮವಾಗಿರಬಹುದೇ ತಿಳಿಯದಾಗಿದೆ.

ಎರಡನೆಯ ಬಿಂಬ ಪಾರಿವಾಳ ಮತ್ತು ರಾಜಕುಮಾರ್‌ರ – 'ಕಸ್ತೂರಿ ನಿವಾಸ'ದ್ದು (1971). ಸಿನಿಮಾದಲ್ಲಿ ಬರುವ ಬಿಳಿ ಪಾರಿವಾಳ ತನ್ನ ಯಜಮಾನ ರವಿಯ (ರಾಜಕುಮಾರ್) ಸುತ್ತ ಸುತ್ತ ಕುಟ್ರು ಕುಟ್ರು... ಕುಟ್ರು ಕುಟ್ರು... ಎಂದು ವೈಯಾರದಿಂದ ಮೈಬಳುಕಿಸಿ ನಡೆದಾಡಿದ್ದನ್ನು, ಕನ್ನಡಕುಲ ಕಂಠೀರವ ರಾಜಕುಮಾರರ ಭುಜದ ಮೇಲೆ ಕುಳಿತು ಬೀಗಿದ್ದನ್ನು ಕನ್ನಡ ಜನ–ಮನ ಎಂದಿಗೂ ಮರೆಯಲಾರರು. ವರನಟನ ಕೈಸೋಕಿದರೆ ಸಾಕು, ನೇರವಾಗಿ ನೋಡಿದರೆ ಸಾಕು, ಜೊತೆಗೆ ನಿಂತು ಒಂದು ಫೋಟೊ ತೆಗೆಸಿಕೊಂಡರೆ ಸಾಕು ಎಂದು ಹಂಬಲಿಸುತ್ತಿದ್ದ ಕಲಾಭಿಮಾನಿಗಳ ಎದುರಿಗೆ ಮೇರು ನಟನ ಭುಜದ ಮೇಲೆ ತನ್ನ ಪುಟ್ಟ ಕಾಲುಗಳನ್ನು ಇಡುವುದು ಸಾಮಾನ್ಯವೇ? ಆ ಕಾಲುಗಳಿಗೆ ಹೊನ್ನಿನ ಗೆಜ್ಜೆಯನ್ನೇ ಕಟ್ಟಬೇಕು. ಪರರ ಒಳಿತಿಗಾಗಿ ಬದುಕನ್ನೇ ಮುಡಿಪಿಟ್ಟಿದ್ದ ಕಸ್ತೂರಿ ನಿವಾಸದ ದೊರೆ ರವಿಯಂತೆಯೇ ಅದೂ ಸಹ ಕೊನೆಯಲ್ಲಿ ಮಾರಾಟವಾಗಿ ಇನ್ನೊಬ್ಬರ ಆತಿಥ್ಯಕ್ಕೆ ನೆರವಾಗುತ್ತದೆ. ಅನೇಕ ಸಿಕ್ಕುಗಳ ನಡುವೆ ಒದ್ದಾಡುವ ನಾಯಕನನ್ನು ಕಂಡು ಮರುಗುವ ಪ್ರೇಕ್ಷಕನ ಮನದಲ್ಲಿ ರಾಜ್ ನೆನಪಾದಾಗ ಈ ಪಾರಿವಾಳವೂ ಜೊತೆಗಿದ್ದರೆ ಅಚ್ಚರಿ ಇಲ್ಲ. ರಾಜಕುಮಾರ ತನ್ನ ಬದುಕಿನುದ್ದಕ್ಕೂ ಹೆಗಲಲ್ಲಿ ಹೊತ್ತಿದ್ದು ಅಭಿಮಾನಿಗಳ ಪರಿಶುದ್ಧ ಪ್ರೀತಿಯನ್ನು, ಜನ್ಮತಃ ಬಂದ ವಿನಯವನ್ನು ಎಂಬುದನ್ನು ಸೂಚಿಸುವ ಮೂರ್ತರೂಪ ಈ ಪಾರಿವಾಳವೇ ಇರಬಹುದೇ. ಪ್ರೀತಿ ಮತ್ತು ಕರುಣೆಯನ್ನು ರಾಜಕುಮಾರ್ ತನ್ನ ಹೆಗಲಲ್ಲಿ ಹೊತ್ತಿದ್ದಾರೆ ಎಂಬುದರ ರೂಪಕವಾಗಿತ್ತೇ ಆ ಶ್ವೇತ ಪಾರಿವಾಳ!

ಮೂರನೆಯದು, ಎಮ್ಮೆ ಮತ್ತು ರಾಜಕುಮಾರ್ ಚಿತ್ರ. ಯಾರನ್ನಾದರೂ ಕುಟುಕುವಾಗ 'ಏನೋ ಎಮ್ಮೆ ಚರ್ಮದೋನೆ', 'ನೀನೊಬ್ಬ ಎಮ್ಮೆ ತಮ್ಮಣ್ಣ ಬಿಡು', 'ಎಮ್ಮೆಹಾಲು ಕುಡಿದೋನಿಗೆ ಚುರುಕು ಬುದ್ಧಿ ಎಲ್ಲಿಂದ ಬರುತ್ತೆ?' ಎಂದೆಲ್ಲಾ ಛೇಡಿಸುತ್ತೇವೆ. ಭಾರತದ ಹಳ್ಳಿಗಳ ಆರ್ಥಿಕ ಬೆಳವಣಿಗೆಗೆ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿರುವ ಎಮ್ಮೆಗಳ ಮೇಲೆ ನಮಗ್ಯಾಕಿಷ್ಟು ತಾತ್ಸಾರ. ಎಮ್ಮೆಗಳಿಲ್ಲದ ಗ್ರಾಮೀಣ ಭಾರತವನ್ನು ಊಹಿಸಿಕೊಳ್ಳಲಾದರೂ ಆದೀತೆ. 'ತೊಟ್ಟಿಲ ಹೊತ್ಕಂಡು ತವರ್ಬಣ್ಣ ಉಟ್ಕೊಂಡು ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು| ಅಪ್ಪ ಕೊಟ್ಟೆಮ್ಮ ಹೊಡ್ಕೊಂಡು| ತೌರೂರ ತಿಟ್ಹತ್ತಿ ತಿರುಗಿ ನೋಡ್ಯಾಳೋ||' – ಈ ಸಾಲುಗಳೇ ಹೇಳುತ್ತಿಲ್ಲವೆ, ಎಮ್ಮೆ ಜನಪದರ ಬದುಕಿನ ಭಾಗವೆಂದು. ಅಷ್ಟೆಲ್ಲಾ ಯಾಕೆ, ಕನ್ನಡದ ರೂಪಕವಾದ ರಾಜ್, 'ಸಂಪತ್ತಿಗೆ ಸವಾಲ್' (1974) ಸಿನಿಮಾದಲ್ಲಿ ಎಮ್ಮೆಯ ಮೇಲೆ ಕೂತು ಎಮ್ಮೆಯನ್ನು ಗುಣಗಾನ ಮಾಡುತ್ತಾ ಗಾನಾಭಿನಯ ಮಾಡಲಿಲ್ಲವೆ.

'ಯಾರೇ ಕೂಗಾಡಲಿ, ಊರೇ ಹೋರಾಡಲಿ, ಎಮ್ಮೆ ನಿನಗೆ ಸಾಟಿಯಿಲ್ಲ, ನಿನ್ನ ನೆಮ್ಮದಿಗೆ ಭಂಗವಿಲ್ಲ...' ಎಂಬ ಹಾಡನ್ನು ಎಲ್ಲಿ–ಯಾರಾದರೂ ಹಾಡಿಕೊಳ್ಳುವಾಗ ಅವರಲ್ಲಿರುವ ಜೀವನೋತ್ಸಾಹವನ್ನು ನೋಡಿ, ಅದು ಎಂದಿಗೂ ಬತ್ತದ್ದು. ಬೇಕಿದ್ದರೆ ಈಗ ಒಮ್ಮೆ ಹೇಳಿಕೊಳ್ಳಿ! ಈ ಹಾಡು ಎಮ್ಮೆ ಸಾಕಿದ ಮನೆಯವರ ಪಾಲಿಗೆ ಸುಪ್ರಭಾತವಾಗಿರಲೂಬಹುದು. ಎಮ್ಮೆಯ ಮೇಲೆ ಕುಳಿತು ಸಾಗುವ ಹಿತವನ್ನು ಬಲ್ಲವರೇ ಬಲ್ಲರು. ಕಪ್ಪುಮಣ್ಣಿನ ಬಸಿರಿಂದ ಬಂದ ಕನ್ನಡದ ಪ್ರತಿನಿಧಿಯಾದ ರಾಜಕುಮಾರ್ ಮಹಿಷಮಂಡಲದ ಪ್ರಾತಿನಿಧಿಕ ಪ್ರಾಣಿಯಾದ ಎಮ್ಮೆಯ ಮೇಲೆ ಕೂತು ಸವಾರಿ ಮಾಡುವಾಗ ಅದು ಹಳೆಬೇರು–ಹೊಸಚಿಗುರಿನ ಸಾವಯವ ಸಂಬಂಧದಂತೆಯೇ ಕಾಣುತ್ತದೆ. 'ಎಮ್ಮೆತಮ್ಮಣ್ಣ' ಎಂಬ ನುಡಿಗಟ್ಟು ಹಳ್ಳಿಗಮಾರ, ಏನೂ ತಿಳಿಯದ ಅನಾಗರಿಕ ಎಂಬ ಅರ್ಥವನ್ನು ಹೊಮ್ಮಿಸಿದರೂ ರಾಜಕುಮಾರ್ 'ಎಮ್ಮೆ ತಮ್ಮಣ್ಣ' (1966) ಎಂಬ ಹೆಸರಿನ ಸಿನಿಮಾದಲ್ಲಿ ನಟಿಸಿ, ಹಳ್ಳಿಯಲ್ಲಿ ಎಮ್ಮೆ ಕಾಯುವ ವ್ಯಕ್ತಿಯೂ ನಗರದಲ್ಲಿ ವೈದ್ಯ ಮಾಡುವ ವ್ಯಕ್ತಿಯೂ ತಮ್ಮ–ತಮ್ಮ ವಿದ್ಯೆ–ವಿವೇಕದಲ್ಲಿ ಪರಸ್ಪರ ಸಮಬಲರು, ಎಮ್ಮೆ ಕಾಯುವುದು, ಕೃಷಿ ಚಟುವಟಿಕೆ ನಡೆಸುವುದು ಇತರ ವೃತ್ತಿಗಳ ಮುಂದೆ ಕೀಳಲ್ಲ ಎಂದು ರೈತರ–ಶ್ರಮಿಕರ ಕೆಲಸಗಳ ಹಿರಿಮೆಯನ್ನು ಎತ್ತಿಹಿಡಿದಿಲ್ಲವೇ? ಇದು ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ ಎಂಬ ಕನ್ನಡ ನವೋದಯದ ದರ್ಶನವನ್ನೇ ರಾಜ್ ತನ್ನ ಸಿನಿಮಾ ಮೂಲಕ ಕಟ್ಟಿದ ರೀತಿ.

ರಾಜಕುಮಾರರ ಸಿನಿಮಾದಲ್ಲಿ ಇವಿಷ್ಟೇ ಅಲ್ಲ – ಗಂಧದ ಗುಡಿ, ಶ್ರೀಕೃಷ್ಣ ದೇವರಾಯ, ರಣಧೀರ ಕಂಠೀರವ, ಎರಡು ನಕ್ಷತ್ರ, ಸಿಪಾಯಿರಾಮು, ಹುಲಿಯ ಹಾಲಿನ ಮೇವು ಮುಂತಾದ ಚಿತ್ರಗಳಲ್ಲಿ ಆನೆ, ಹುಲಿ, ಸಿಂಹ, ಕುದುರೆ, ಹೆಬ್ಬಾವು ಮೊದಲಾದ ಕಾಡುಪ್ರಾಣಿಗಳು ಹಾಗೂ ಬಂಗಾರದ ಮನುಷ್ಯ, ಒಡಹುಟ್ಟಿದವರು, ಭಕ್ತ ಚೇತ ಮುಂತಾದ ಚಿತ್ರದಲ್ಲಿ ಜಾನುವಾರುಗಳು ಬರುತ್ತವೆ. ಇಂತಹ ಸಿನಿಮಾಗಳು ಭಾರತದ ಕೂಡು ಕುಟುಂಬದ ರೂಪಕಗಳು. ಬದುಕನ್ನು ಇತರ ಸಹಜೀವಿಗಳೊಂದಿಗೆ ಹಂಚಿಕೊಳ್ಳಬೇಕೆಂಬ ವಿವೇಕವನ್ನು ಕಲಿಸಬಂದ ಸಿನಿಮಾ ರೂಪದ ಪಠ್ಯಗಳು.

**ಪ್ರತಿಕ್ರಿಯಿಸಿ: feedback@sudha.co.in**